## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 190/2024**

| | | |
|---|---|---|
| ಸಾಕ್ಷಿದಾರರ ಹೆಸರು | ಃ ನಿರಂಜನ್ ಗೌಡ | ಸಿ.ಡಬ್ಲ್ಯೂ- **1** |
| ತಂದೆಯ ಹೆಸರು | ಃ ಶಂಕರೇಗೌಡ | ಪಿ.ಡಬ್ಲ್ಯೂ-**4** |
| ವಯಸ್ಸು | ಃ **31** ವರ್ಷ | |
| ಉದ್ಯೋಗ | ಃ ಪಿ ಎಸ್ ಐ | |
| ವಾಸಸ್ಥಳ | ಃ ನ ರಾ ಪುರ | |

ದಿನಾಂಕಃ **09.12.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ನಾನು 2023 ರಿಂದ ಈವರೆಗೆ ನ.ರಾ.ಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 07.03.2024 ರಂದು ಸಂಜೆ 4.00 ಗಂಟೆಯಲ್ಲಿ ನಾನು ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಸೌತಿಕೆರೆ ಪಾರ್ಕ್ ಹತ್ತಿರ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಕೊಪ್ಪ ಡಿ ವೈ ಎಸ್ ಪಿ ರವರಿಗೆ ದಾಳಿ ನಡೆಸಲು ಅನುಮತಿ ನೀಡಬೇಕೆಂದು ಇ ಮೇಲ್ ಮೂಲಕ ಮನವಿ ಸಲ್ಲಿಸಿಕೊಂಡು ಅನುಮತಿ ಪಡೆದುಕೊಂಡಿರುತ್ತೇನೆ. ನಂತರ ದಾಳಿ ಸಮಯದಲ್ಲಿ ಪತ್ರಾಂಖಿತ ಅಧಿಕಾರಿಯಾಗಿ ಸಹಕರಿಸಲು ಚಾಸಾ-2 ರವರಿಗೆ ಮನವಿ ಮಾಡಿಕೊಂಡಿದ್ದು ಅವರು ಒಪ್ಪಿದ ಮೇರೆಗೆ ಚಾಸಾ-3 ಮತ್ತು 4 ರವರಿಗೆ ಪಂಚರಾಗಿ ಸಹಕರಿಸಲು ಕೇಳಿಕೊಂಡಿದ್ದು, ನಂತರ ಅವರಿಗೆ ಮುಂಚಿತವಾಗಿ ನೋಟೀಸು ನೀಡಿದ್ದು, ಅವರು 4.25 ಗಂಟೆಗೆ ಠಾಣೆಗೆ ಬಂದಿದ್ದು, ಅವರಿಗೆ ದಾಳಿ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಅವರು ಒಪ್ಪಿದ ಮೇರೆಗೆ ನಾವು ಅದೇ ದಿನ ಸಂಜೆ 4.45 ಗಂಟೆಗೆ ನಾವು ಮತ್ತು ಸಿಬ್ಬಂದಿಯವರು ಠಾಣೆಯಿಂದ ಹೊರಟು ಸೌತಿಕೆರೆಗೆ ಸಂಜೆ 4.55 ಗಂಟೆಗೆ ಹೋಗಿದ್ದು, ಅಲ್ಲಿ ನಾನು ಮತ್ತು ಚಾಸಾ-2 ರಿಂದ ಚಾಸಾ-4 ರವರು 50 ಮೀ ದೂರದಲ್ಲಿ ನಿಂತು ನೋಡಲಾಗಿ ಆರೋಪಿತರು ಸೌತಿಕೆರೆ ಸರ್ಕಲ್ ಬಳಿ ನಿಂತಿದ್ದು

ಅವರ ಮೇಲೆ 5-10 ನಿಮಿಷ ನಿಗಾ ವಹಿಸಿದ್ದು, ಆರೋಪಿತರು ತಮ್ಮ ಕೈಯಲ್ಲಿದ್ದ ಕವರ್ ನಿಂದ ಸಣ್ಣ ಸಣ್ಣ ಪ್ಯಾಕಟ್ ಗಳನ್ನು ಮಾಡಿ ಬೇರೆಯವರಿಗೆ ಕೊಟ್ಟು ದುಡ್ಡು ತೆಗೆದುಕೊಳ್ಳುವುದನ್ನು ನೋಡಿದ್ದು ದಾಳಿ ನಡೆಸಿ ಸದರಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಹಿಡಿದು ವಿಚಾರಿಸಿದಾಗ ಅದರಲ್ಲಿ ಒಬ್ಬ ಆರೋಪಿ ತನ್ನ ಹೆಸರು ನಿಕ್ಷೇಪ್, ಅರುಣ, ಹರ್ಷದ್ ಎಂದು ತಿಳಿಸಿರುತ್ತಾರೆ. 1 ನೇ ಆರೋಪಿ ಕೈಯಲ್ಲಿರುವ ಕವರ್ ಅನ್ನು ಪರಿಶೀಲಿಸಿ ನೋಡಲಾಗಿ ಯಾವುದೋ ಸೊಪ್ಪಿನ ತರ, ಬೀಜ, ಕಡ್ಡಿ ಇದ್ದು, ಸದರಿ ಸೊಪ್ಪನ್ನು ಪಂಚರ ಸಮಕ್ಷಮ ಆರೋಪಿತರ ಅಂಗಶೋಧನೆಯನ್ನು ಚಾಸಾ-2 ರವರು ಮಾಡಬೇಕೆ ಅಥವಾ ಅವರ ಸಮಕ್ಷಮ ನಾನು ಮಾಡಬೇಕೆ ಎಂದು ಕೇಳಿದ್ದು, ಆರೋಪಿತರು ಪೊಲೀಸರು ಮಾಡಬಹುದು ಎಂದು ಆರೋಪಿತರು ತಿಳಿಸಿದ ಮೇರೆಗೆ ನಾವು ಆರೋಪಿತರ ಅಂಗಶೋಧನೆ ಮಾಡಿದಾಗ 1 ನೇ ಆರೋಪಿಯ ಕೈಯಲ್ಲಿದ್ದ ಒಂದು ಕವರ್ ಇದ್ದು, ಅದರಲ್ಲಿ ಏನಿದೆ ಎಂದು ಕೇಳಿದ್ದು ಆರೋಪಿತರು ಗಾಂಜಾ ಎಂದು ತಿಳಿಸಿರುತ್ತಾರೆ. ನಂತರ ಸದರಿ ಕವರನ್ನು ತೂಕ ಮಾಡಿದಾಗ 73 ಗ್ರಾಂ ಗಾಂಜಾ ಆಗಿರುತ್ತದೆ. ನಂತರ ಮುಂದಿನ ಕ್ರಮಕ್ಕಾಗಿ ಸದರಿ ಗಾಂಜಾವನ್ನು ಸೀಜ್ ಮಾಡಿ ಆರ್ ಎಂಬ ಅಕ್ಷರ ಹಾಕಿ ನಂತರ 2 ನೇ ಆರೋಪಿ ಅಂಗಶೋಧನೆ ಮಾಡಿದಾಗ ಆತನ ಬಳಿ ಒಂದು ಗ್ರಾಂ ಗಾಂಜಾ ಸಿಕ್ಕಿರುತ್ತದೆ. ನಂತರ 3 ನೇ ಆರೋಪಿಯ ಅಂಗಶೋಧನೆ ಮಾಡಿದಾಗ ಆತನ ಬಳಿ ಒಂದು ಗ್ರಾಂ ಪ್ಯಾಕೆಟ್ ಗಾಂಜಾ ಸಿಕ್ಕಿರುತ್ತದೆ. ಮುಂದಿನ ಮುಂದಿನ ಕ್ರಮಕ್ಕಾಗಿ ಸದರಿ ಗಾಂಜಾವನ್ನು ಸೀಜ್ ಮಾಡಿ ಆರ್ ಎಂಬ ಅಕ್ಷರ ಹಾಕಲಾಗಿರುತ್ತದೆ. ನಂತರ ಅಲ್ಲಿರುವ ವಾಹನಗಳ ಬಗ್ಗೆ ಅಂದರೆ ಕೆಎ-04-ಎಂಕೆ-0793 ಹೊಂಡ ಸಿಟಿ ಕಾರ್ ಆಗಿದ್ದು, ಅದರ ಬಗ್ಗೆ ಕೇಳಲಾಗಿ ಗಾಂಜಾ ಮಾರಾಟ ಮಾಡಲು ಬಂದ 1 ನೇ ಆರೋಪಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಇನ್ನೊಂದು ಹೀರೋ ಹೊಂಡ ಹಂಕ್ ಬೈಕ್ ಇದ್ದು ಅದರ ಸಂಖ್ಯೆ: ಕೆಎ-18-ಆರ್-7285 ಆಗಿದ್ದು, ಅದು 3 ನೇ ಆರೋಪಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಸದರಿ ವಾಹನಗಳನ್ನು ಮತ್ತು ಗಾಂಜಾವನ್ನು ಪಂಚರಾದ ಚಾಸಾ-2 ರಿಂದ 4 ರವರ ಸಮಕ್ಷಮ ಮಹಜರನ್ನು ಸಂಜೆ 5.10 ರಿಂದ 6.30 ರವರೆಗೆ ಮಹಜರ್ ಮಾಡಿ ಮಹಜರ್ ಮೂಲಕ ಜಪ್ತು ಮಾಡಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ನಂತರ ಆರೋಪಿತರು ಮತ್ತು ಸ್ವತ್ತುಗಳ ಸಮೇತ ಠಾಣೆಗೆ ಹಿಂತಿರುಗಿ ಚಾಸಾ-16 ರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ.

ಸಾಕ್ಷಿಯು ಡಿ ವೈ ಎಸ್ ಪಿ ಕೊಪ್ಪ ರವರಿಗೆ ನೀಡಿರುವ ಮನವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸರ್ಚ್ ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಚಾಸಾ-2 ರವರಿಗೆ ನೀಡಿರುವ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ತಹಶೀಲ್ದಾರ್ ಕಚೇರಿಗೆ ನೀಡಿರುವ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ ಕಚೇರಿಗೆ ನೀಡಿರುವ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನಗಳನ್ನು ನಿಪಿ-2 ರಲ್ಲಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎಂಒ-1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಕೆ ಎಸ್ ಎಸ್ ವಕೀಲರಿಂದ ಃ</u>

ನ ರಾ ಪುರ ಪೊಲೀಸ್ ಠಾಣೆ ನ ರಾ ಪುರ ಟೌನ್ ನಲ್ಲಿರುತ್ತದೆ ಎಂದರೆ ಸರಿ. ಜನಸಂದಣಿ ಇರುವ ಪ್ರದೇಶದಲ್ಲಿ ಪೊಲೀಸ್ ಠಾಣೆ ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ಸಿಸಿ ಟಿ ವಿ ಇದೆ ಎಂದರೆ ಸರಿ. ಸಿಸಿಟಿವಿಯಲ್ಲಿ ನಮ್ಮ ಠಾಣೆಯಲ್ಲಿ ನಡೆಯುವ ದೃಶ್ಯಾವಳಿಗಳು ನಮೂದಾಗುತ್ತದೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ 4 ಸಿಸಿ ಕ್ಯಾಮೆರಾಗಳು ಇವೆ ಎಂದರೆ ಸರಿ. ಸದರಿ ದೃಶ್ಯಗಳು ಟೈಮಿಂಗ್ ಸಮೇತ ಇರುತ್ತದೆ ಎಂದರೆ ಸರಿ. ಸದರಿ ದೃಶ್ಯಾವಳಿಗಳನ್ನು ಸೇವ್ ಮಾಡಿ ಇಡಬೇಕು ಎಂದು ಆದೇಶ ಇರುತ್ತದೆ ಎಂದರೆ ಸರಿ. ನಮ್ಮ ಠಾಣೆಯಲ್ಲಿ ಸ್ವಾಗತಕಾರರ ವಹಿಯನ್ನು ಇಡಲಾಗಿರುತ್ತದೆ ಎಂದರೆ ಸರಿ. ಸದರಿ ವಹಿಯಲ್ಲಿ ಠಾಣೆಗೆ ಬರುವವರ ಹೆಸರು ಮತ್ತು ಉದ್ದೇಶವನ್ನು ಬರೆಯಲಾಗುತ್ತದೆ ಎಂದರೆ ಸರಿ.

ನಾನು ಪಂಚರಾಗಿ ಸಾರ್ವಜನಿಕರನ್ನು ಕರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಾಂಜಾ ಪ್ರಕರಣ ಆಗಿದ್ದರಿಂದ ಸರ್ಕಾರಿ ನೌಕರರನ್ನು ಬರಮಾಡಿಕೊಂಡಿರುತ್ತೇನೆಂದು ನುಡಿಯುತ್ತಾರೆ. ನಮ್ಮ ಠಾಣೆಯಿಂದ ಅರ್ಧ ಕಿ ಲೋ ಮೀ ದೂರದಲ್ಲಿ ಪಟ್ಟಣ ಪಂಚಾಯ್ತಿ ಇದೆ ಎಂದರೆ ಸರಿ. ಅದರ ಎದುರುಗಡೆ ಪಶು ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಮಿನಿ ವಿಧಾನಸೌಧ ಠಾಣೆಯಿಂದ 2 ಕಿ ಮೀ ದೂರದಲ್ಲಿದೆ ಎಂದರೆ ಸರಿ. ಪಟ್ಟಣ ಪಂಚಾಯ್ತಿಗೆ ಮತ್ತು ಮಿನಿ ವಿಧಾನಸೌಧಕ್ಕೆ ಹೋಗಿ ಬರಲು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ.

ಡಿ ವೈ ಎಸ್ ಪಿ ರವರಿಗೆ ಮನವಿಯನ್ನು ಗಿರೀಶ್ ರವರು ಟೈಪ್ ಮಾಡಿ ಕಳುಹಿಸಿರುತ್ತಾರೆ. ಸದರಿ ಮನವಿಯನ್ನು ಇ ಮೇಲ್ ಮುಖಾಂತರ ಕಳುಹಿಸಿರುತ್ತೇವೆ. ನಮ್ಮ ಠಾಣೆಯ ಇ ಮೇಲ್ ಇಂದ ಕಳುಹಿಸಿರುತ್ತೇವೆ. ಡಿ ವೈ ಎಸ್ ಪಿ ಕಚೇರಿಯ ಇ ಮೇಲ್ ಅಡ್ರೆಸ್ ಗೆ ನಾವು ಮನವಿಯನ್ನು ಕಳುಹಿಸಿರುತ್ತೇವೆ. ಸದರಿ ಇ ಮೇಲ್ ನಲ್ಲಿ ಕಳುಹಿಸಿರುವ ಪತ್ರಗಳು 6 ತಿಂಗಳ ಬ್ಯಾಕ್ ಅಪ್ ಇರುತ್ತದೆ. ಸದರಿ ಮೇಲ್ ಶಾಶ್ವತವಾಗಿ ಸೇವ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ ನ ಸ್ಕ್ರಿನ್ ಶಾಟನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅನುಮತಿಯನ್ನು ಡಿ ವೈ ಎಸ್ ಪಿ ರವರು ಇ ಮೇಲ್ ಮೂಲಕ ನಮ್ಮ ಇ ಮೇಲ್ ಗೆ ಕಳುಹಿಸಿರುತ್ತಾರೆ. ಸಾಕ್ಷಿ ಮುಂದುವರೆದು ಇ ಮೇಲ್ ನಂತರ ಹಾರ್ಡ್ ಕಾಪಿಯನ್ನು ಸಿಬ್ಬಂದಿ ಮೂಲಕ ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ಮೇಲ್ ಕಾಪಿಯನ್ನು ಕಳುಹಿಸಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸರ್ಚ್ ವಾರೆಂಟ್ ನಲ್ಲಿ ಮೇಲ್ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ-4 ರಲ್ಲಿ ನನಗೆ ನೀಡಿರುವಹಾಗೆ ಬರೆದಿರುತ್ತಾರೆಂದರೆ ಸಾಕ್ಷಿಯು ನನಗೆ ನಿರ್ದೇಶನ ನೀಡಿರುತ್ತಾರೆಂದು ನುಡಿಯುತ್ತಾರೆ.

ಮೇಲ್ ಗೆ ಸಂಬಂಧಿಸಿ ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಹಾರ್ಡ್ ಕಾಪಿ ನೀಡಿರುತ್ತೇವೆಂದು ನುಡಿಯುತ್ತಾರೆ. ಚಾಸಾ-2 ಠಾಣೆಗೆ ಮೊದಲಿಗೆ ಬಂದಿರುತ್ತಾರೆ. ಚಾಸಾ-3 ಮತ್ತು 4 ರವರು ಸಹ ಮೊದಲಿಗೆ ಠಾಣೆಗೆ ಬಂದಿರುತ್ತಾರೆ. ಸದರಿ ಚಾಸಾ-2 ರಿಂದ 4 ರವರು ಸ್ವಾಗತವಹಿಯಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ-2 ರಿಂದ 4 ರವರಿಗೆ ಠಾಣೆಯಲ್ಲಿ ನೋಟೀಸು ನೀಡಿರುತ್ತೇನೆಂದರೆ ಸರಿ. ಚಾಸಾ-2 ರಿಂದ 4 ರವರಿಗೆ ವಿಚಾರ ತಿಳಿಸಿ ನಾವು ಠಾಣೆಯಿಂದ ಹೊರಡುವಾಗ ಸಮಯ ಸಂಜೆ 4.45 ಗಂಟೆ ಆಗಿರುತ್ತದೆ.

ನಮ್ಮನ್ನು ಹೊರತುಪಡಿಸಿ ಉಳಿದ ಸಿಬ್ಬಂದಿಯವರು ಯಾರು ಯಾರು ಯಾವ ಯಾವ ವಾಹನಗಳಲ್ಲಿ ಬಂದಿರುತ್ತಾರೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸೌತಿಕೆರೆ ಒಂದು ಸರ್ಕಲ್ ಆಗಿರುತ್ತದೆ ಎಂದರೆ ಸರಿ. ಸೌತಿಕೆರೆಯಲ್ಲಿ ಅಂಗಡಿ ಮತ್ತು ಹೋಟೆಲ್ ಗಳು ಇದ್ದು ಜನಸಂದಣಿ ಇರುತ್ತದೆ ಎಂದರೆ ಸರಿ. ಸೌತಿಕೆರೆಯಲ್ಲಿರುವ ಉದ್ಯಾವನಕ್ಕೆ ಟಿಕೆಟ್ ನೀಡಲು ಫಾರೆಸ್ಟ್ ಗಾರ್ಡ್ ಇರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಸಮಯದಲ್ಲಿ ಇರುವ ಬಗ್ಗೆ ನಮಗೆ ಗೊತ್ತಿರುವುದಿಲ್ಲ. ಉದ್ಯಾವನದ ಎದುರುಗಡೆ ಅರಣ್ಯ ಭವನ ಇದ್ದು, ಸದರಿ ಭವನದಲ್ಲಿ ಉಸ್ತುವಾರಿ ಯಾರು ಮಾಡುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಸದರಿ ಭವನದಲ್ಲಿ ಯಾರಿದ್ದಾರೆಂದು ನಾನು ವಿಚಾರಿಸಿರುವುದಿಲ್ಲ ಬೀಗ ಹಾಕಿರುತ್ತದೆ ಎಂದು ನುಡಿಯುತ್ತಾರೆ.

ನಾನು ಸೌತಿಕೆರೆ ಕಳ್ಳಿಕೊಪ್ಪ ಪಾರ್ಕ್ ಮಧ್ಯ ರಸ್ತೆಯಲ್ಲಿ ನಿಂತಿರುತ್ತೇವೆ. ಸುಮಾರು 10 ನಿಮಿಷದವರೆಗೆ ನಿಂತಿರುತ್ತೇವೆ. ಆ ಸಮಯದಲ್ಲಿ ನಾವುಗಳು ಸಮವಸ್ತ್ರದಲ್ಲಿದ್ದೆವು. ನಾನು ನಿಂತಿರುವ ಸದರಿ ಸ್ಥಳದಿಂದ 200 ಮೀ ವರೆಗೆ ನೇರವಾದ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ಹೋಟೆಲ್ ಬಿಲ್ಡಿಂಗ್ ಗಳು ಇವೆ ಎಂದು ನುಡಿಯುತ್ತಾರೆ. ಸೌತಿಕೆರೆ ಕಳ್ಳಿಕೊಪ್ಪ ರಸ್ತೆ 200 ಮೀ ವರೆಗೆ ನೇರವಾದ ರಸ್ತೆ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ನಿಂತಿರುವ ಸ್ಥಳದಿಂದ 100-200 ಮೀ ದೂರದವರೆಗೆ ನೋಡಿದರೆ ಯಾರು ಏನು ಮಾಡುತ್ತಿರುತ್ತಾರೆ ಎಂದು ತಿಳಿದು ಬರುತ್ತದೆ ಎಂದರೆ ಸರಿ. 200 ಮೀ ದೂರದಲ್ಲಿ ನಿಂತಿರುವ ವ್ಯಕ್ತಿಯು ನಮ್ಮ ಕಡೆ ನೋಡಿದರೆ ನಾವು ಇರುವ ಬಗ್ಗೆ ತಿಳಿದು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನೋಡಿದರೆ ತಿಳಿದು ಬರುತ್ತದೆ ಎಂದು ನುಡಿಯುತ್ತಾರೆ.

ಆರೋಪಿತರನ್ನು ನಾವು ನಿಂತ ಸ್ಥಳದಿಂದ ಓಡಿಹೋಗಿ ಹಿಡಿದಿರುತ್ತೇವೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ